ಇ) 11ನೇ ಹಣಕಾಸು ಯೋಜನೆಯ ಅನುದಾನ ಅಡಿಯಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈವರೆಗೆ ಏನು ಹಣ ಖರ್ಚು ಆಗಿರುವುದಿಲ್ಲ.

ಈ) ಸದ್ಯದಲ್ಲಿಯೇ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು. ಹಾಗೂ ಆದಷ್ಟು ಬೇಗನೆ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

809 (1379) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) 10ನೇ ಹಣಕಾಸು ಯೋಜನೆಯಲ್ಲಿ ಬೀದರ್ ಜಿಲ್ಲೆಗೆ ಬಿಡುಗಡೆ ಮಾಡಿದ ಹಣವೆಷ್ಟು;

ಆ) ಇದರಲ್ಲಿ, ಹುಲಸೂರು ಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಹಣವೆಷ್ಟು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) 10ನೇ ಹಣಕಾಸು ಯೋಜನೆಯೆಂಬ ಯಾವುದೇ ಯೋಜನೆಯು ಇಲ್ಲದೇ ಇರುವುದರಿಂದ, ಬೀದರ್ ಜಿಲ್ಲೆಗೆ ಹಣ ಬಿಡುಗಡೆ ಮಾಡಿದ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ.

810(1380) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಗೆ 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿದೆಯೆ. ಇದರಲ್ಲಿ ಹುಲಸೂರು ಕ್ಷೇತ್ರಕ್ಕೆ ಮಂಜೂರು ಆಗಿರುವುದೆಷ್ಟು;

ಆ) ಮೆಹಕರ, ಕಟಕ – ಚಿಂಚೋಳಿ ಹಾಗೂ ಮುಚಳಂಬಾಗಳಲ್ಲಿ ಇಲ್ಲಿ 33 ಕೆ.ವಿ. ಸ್ಟೇಷನ್‌ಗಳನ್ನು ನಿರ್ಮಾಣಕ್ಕಾಗಿ ಅಡಿಗಲ್ಲು ಇಡಲಾಗಿದೆಯೇ: ಇದುವರೆಗೂ ಕಾಮಗಾರಿ ಪ್ರಾರಂಭಿಸಿರುವುದಿಲ್ಲ. ಇದಕ್ಕೆ ಕಾರಣವೇನು;

ಇ) ಅಲ್ಲದೆ ಘಾಟ ಬೋರಳದಲ್ಲಿ 33 ಕೆ. ವಿ. ಕಾಮಗಾರಿ ಮುಗಿದು 2 ವರ್ಷವಾದರೂ ಉದ್ಘಾಟನೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಯಾವಾಗ ಉದ್ಘಾಟಿಸಲಾಗುವುದು?

ಶ್ರೀ ಎಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೀದರ್ ಜಿಲ್ಲೆಗೆ ಒಟ್ಟು 8 (ಎಂಟು) 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ ಹುಲಸೂರು ಕ್ಷೇತ್ರಕ್ಕೆ ಮಂಜೂರಾದ 33 ಕೆ.ವಿ. ಸ್ಟೇಷನ್‌ಗಳ ಸಂಖ್ಯೆ ಮೂರು.

ಆ) ಈ ಸ್ಟೇಷನ್‌ಗಳಿಗೆ ಅಡಿಗಲ್ಲು ಹಾಕಿರುವುದಿಲ್ಲ. ಕಾರಣ, ಟೆಂಡರ್ ಕರೆದಾಗ ಸಂಸ್ಥೆ/ ಏಜೆನ್ಸಿಗಳಿಂದ ನಿರೀಕ್ಷಿತ ಸ್ಪಂದನೆ ಬಂದಿಲ್ಲದಿರುವುದು. ಇತ್ತೀಚೆಗೆ ಮೆಹಕರ್ ಮತ್ತು ಮುಚಳಂಬಾ ಸ್ಟೇಷನ್‌ಗಳ ಕಾಮಗಾರಿಗೆ ಎರಡು ಸಂಸ್ಥೆಗಳು ಮುಂದೆ ಬಂದಿದ್ದು, ಅವುಗಳಿಗೆ ಕಾಂಟ್ರಾಕ್ಟ್ ಅವಾರ್ಡ್ ಮಾಡುವಂತೆ ದಿನಾಂಕ 24–1–2005 ರಂದು ಅಧೀಕ್ಷಕ ಇಂಜಿನಿಯರ್ (ವಿ), ಗುಲ್ಬರ್ಗ ವೃತ್ತರವರಿಗೆ ಪತ್ರ ಮುಖೇನ ತಿಳಿಸಲಾಗಿರುತ್ತದೆ. ಕಾಂಟ್ರಾಕ್ಟ್ ಅವಾರ್ಡ್ ಆದ ನಂತರ, ಅವಾರ್ಡ್‌ನ ನಿಬಂಧನೆಯಂತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಕಟಕ–ಚಿಂಚೋಳಿ ಸ್ಟೇಷನ್‌ಗೆ ಟೆಂಡರ್ ಕರೆಯಲು ಅಧೀಕ್ಷಕ ಇಂಜಿನಿಯರ್ (ವಿ). ಗುಲ್ಬರ್ಗ ವೃತ್ತರವರು ಕ್ರಮ ಜರುಗಿಸುತ್ತಿದ್ದಾರೆ.

ಇ) ಘಾಟ್ ಬೋರಾಳ್‌ದಲ್ಲಿ 33 ಕೆ.ವಿ. ಸ್ಟೇಷನ್ ಕಾಮಗಾರಿ ಪೂರ್ಣಗೊಳಿಸಿ, ದಿನಾಂಕ 5–9–2003 ರಿಂದಲೇ ಸ್ಟೇಷನ್ ಕಾರ್ಯಾರಂಭ ಮಾಡಿರುತ್ತದೆ. ಸುಮಾರು ಒಂದುವರೆ ವರ್ಷದಿಂದ ಈ ಸ್ಟೇಷನ್ ಕಾರ್ಯನಿರ್ವಹಿಸುತ್ತಿರುವುದರಿಂದ, ಉದ್ಘಾಟನೆಯು ಈಗ ಅಗತ್ಯ ಇರುವುದಿಲ್ಲ.

811(1468) ಶ್ರೀ ರಾಜೇಂದ್ರ ವರ್ಮ (ಹುಲಸೂರು): ಕಂದಾಯ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಕ್ಷೇತ್ರವಾರು ಹಾಗೂ ತಾಲ್ಲೂಕುವಾರು ಆರಾಧನಾ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಹಣವೆಷ್ಟು ;

ಆ) ಹುಲಸೂರು ಕ್ಷೇತ್ರದಿಂದ ಬಂದ ಅರ್ಜಿಗಳೆಷ್ಟು ; ಅವುಗಳಲ್ಲಿ ಎಷ್ಟು ಇತ್ಯರ್ಥವಾಗಿದೆ ಹಾಗೂ ಎಷ್ಟು ಬಾಕಿ ಇದೆ; ಇವುಗಳ ವಿಲೇವಾರಿಗೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಆರಾಧನ ಯೋಜನೆಯಡಿ ಅನುದಾನವನ್ನು ವಿಧಾನಸಭಾ ಕ್ಷೇತ್ರವಾರು ಸಮಾನವಾಗಿ ಬಿಡುಗಡೆ ಮಾಡಲಾಗುವುದು. ಪ್ರಸ್ತುತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿನ 6 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 2,82,000.00ಗಳಂತೆ ಒಟ್ಟು ರೂ. 16,92,000.00ಗಳು ಬಿಡುಗಡೆ ಮಾಡಲಾಗಿದೆ.

ಆ) ಹುಲಸೂರು ಕ್ಷೇತ್ರವು ಭಾಲ್ಕಿ, ಬಸವಕಲ್ಯಾಣ ಮತ್ತು ಹುಮ್ನಾಬಾದ್ ತಾಲ್ಲೂಕುಗಳನ್ನು ಒಳಗೊಂಡಿದ್ದು, 2003–2004ನೇ ಸಾಲಿನಲ್ಲಿ ಒಟ್ಟು 34 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಆರಾಧನಾ ಸಮಿತಿಯನ್ನು ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಲಾಗುತ್ತಿದ್ದು, ಸಮಿತಿಯ ಮೂಲಕ ಅರ್ಜಿಗಳನ್ನು ವಿಲೇವಾರಿ ಮಾಡಲಾಗುವುದು.

812(1469) ಶ್ರೀ ರಾಜೇಂದ್ರ ವರ್ಮಾ (ಹುಲಸೂರು): ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರಸಕ್ತ ಸರ್ಕಾರ ಬಂದನಂತರ ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ತಾಲ್ಲೂಕು ಮತ್ತು ವಿಧಾನಸಭಾ ಕ್ಷೇತ್ರವಾರು ಯಾವ ಯಾವ ರಸ್ತೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;

ಆ) ಹುಲಸೂರು ಮತಕ್ಷೇತ್ರದಲ್ಲಿ ಬರುವ, ಹುಲಸೂರ ಗ್ರಾಮದಿಂದ ಮಹಾರಾಷ್ಟ್ರ ಗಡಿ ಭಾಗದವರೆಗೆ, ಮಾಣಿಕನಗರದಿಂದ ಖೋಡವಾಡಿ, ಹಳ್ಳಿಖಾಡ (ಬಿ) ದುಬಲಗುಂಡಿ ವಯಾ ಮುಗನೂರು, ಕೇಸರ ಜೀವಳಗದಿಂದ ಅಳವಾಯು ರಸ್ತೆಗಳು ಮಂಜೂರಾಗದೆ ಇರಲು ಕಾರಣಗಳೇನು;

ಇ) ಇದನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) 1) ಹುಲಸೂರು ಗ್ರಾಮದಿಂದ ಮಹಾರಾಷ್ಟ್ರ ಗಡಿ ಭಾಗದವರೆಗಿನ ರಸ್ತೆಯ ರಾಜ್ಯ ಹೆದ್ದಾರಿ ಸಂಖ್ಯೆ 11 ಆಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ಗುಂಡಿ ತುಂಬುವ ಕೆಲಸ ತೆಗೆದುಕೊಳ್ಳಲಾಗಿದೆ, ಹಾಗೂ ರಸ್ತೆ ಸುಧಾರಣೆಗೆ ರೂ. 20.00 ಲಕ್ಷದ ಮೊತ್ತದ ಕಾಮಗಾರಿಯು ತೆಗೆದುಕೊಳ್ಳಲಾಗಿದೆ.